'ನೀವು ಜೊತೆಯಲ್ಲಿದ್ದೀರ, ಹೀಗಿರುವಾಗ ನೀವಿಬ್ಬರು ಮದುವೆ ಏಕೆ ಮಾಡಿಕೊಳ್ಳಬಾರದು?' ನಮ್ಮ ಕೊನೆಯ ಮನೆ ಮಾಲೀಕ ಹೇಳಿದ್ದ.

'ಇದು ನಮ್ಮ ಜೀವನ, ಇದನ್ನು ನಾವು ನಮ್ಮದೇ ಆದ ವಿಧಾನದಿಂದ ಸಾಗಿಸುವ ಅಧಿಕಾರ ನಮಗಿದೆ', ರಿತಿಕ್ ಸೆಟೆದು ಉತ್ತರಿಸಿದ್ದ.

'ನಾವಿರುವ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವಿಸುವ ವಿಧಾನದ ಅಧಿಕಾರ, ಸಮಾಜದ ಕೈಗಳಲ್ಲಿ ಮಾತ್ರ ಇರುತ್ತದೆ'. ನಮ್ಮ ಮನೆಯ ಮಾಲೀಕ ತಿಳಿ ಹೇಳಲು ಪ್ರಯತ್ನಿಸಿದ್ದ; ಈ ಮಾಲೀಕ ಒಬ್ಬ ಪ್ರೊಫೆಸರ್ ಆಗಿದ್ದು, ಅವನ ಸಂಶೋಧನಾ ವಿದ್ಯಾರ್ಥಿನಿಯೊಂದಿಗೆ ಅವನ ಅಫೇರ್ ನಡೆಯುತ್ತಿತ್ತು.

'ನೀವು ಸಹ ನಿಮ್ಮದೇ ಆದ ವಿಧಾನದಲ್ಲಿ ಬದುಕುತ್ತಿದ್ದೀರ', ರಿತಿಕ್ ಅವರ ಗಾಯಕ್ಕೆ ಉಪ್ಪು ಹಾಕಿದ.

'ಇಲ್ಲ, ನಾನಂತೂ ಸಾಮಾಜಿಕ ನಿಯಮಗಳಂತೆಯೇ ಬದುಕುತ್ತಿದ್ದೇನೆ. ನಾನು ವಿವಾಹಿತ, ಆಜ್ಞಾಕಾರಿ ಮತ್ತು ಸಜ್ಜನ ಪತಿಯಾಗಿದ್ದೇನೆ. ನಾನು ಮೂರು ಮಕ್ಕಳ ತಂದೆ, ನೀವೇ ನೋಡುತ್ತಿದ್ದೀರ', ಮನೆಯ ಮಾಲೀಕ ನಗುತ್ತಿದ್ದ.

'ಮತ್ತೆ ಆ ಸುಕನ್ಯಾ?' ರಿತಿಕ್ ಆ ಸಂಶೋಧನಾ ವಿದ್ಯಾರ್ಥಿನಿಯ ಕಡೆಗೆ ಬೆರಳು ಮಾಡಿದ್ದ.

'ನಾನು ಪ್ರೊಫೆಸರ್ ಮಟುಕನಾಥ್ ಆಗಲು ಬಯಸುವುದಿಲ್ಲ; ಅಲ್ಲದೆ ನನ್ನ ಯಾವುದೇ ವಿದ್ಯಾರ್ಥಿನಿಯನ್ನು ಜೂಲಿಯನ್ನಾಗಿ ಮಾಡಿ, ಜನರಿಗೆ ನನ್ನ ಪ್ರೇಮ ಪ್ರಸಂಗವನ್ನು ಸಾರ್ವಜನಿಕಗೊಳಿಸುವ ಅನುಮತಿಯನ್ನು ಕೊಟ್ಟು ನನ್ನ ಮನೆಗೆ ವಿಪತ್ತು ತಂದುಕೊಳ್ಳಲು ನಾನು ಬಯಸುವುದಿಲ್ಲ. ಸಮಾಜ, ಎಲ್ಲವನ್ನೂ ಮರೆಯಲ್ಲಿ ಮಾಡಲು ಅನುಮತಿಯನ್ನು ಕೊಡುತ್ತದೆ. ನೀವು ಬೇಕಾದರೆ ಪರೀಕ್ಷಿಸಿ ನೋಡಿ. ನೀವಿಬ್ಬರು ಬೇರೆ ಬೇರೆ ಮನೆಯಲ್ಲಿರಿ. ಒಬ್ಬರನ್ನೊಬ್ಬರು ಚಿಕ್ಕಪ್ಪ ದೊಡ್ಡಪ್ಪನ ಸೋದರ ಮಾವನ ಅಥವಾ ದತ್ತಕ ಸಹೋದರಸಹೋದರಿ ಎಂದು ಹೇಳಿ. ನಂತರ ಪರಸ್ಪರ ಭೇಟಿಯಾಗಿ ಎಲ್ಲವನ್ನೂ ಮಾಡಿ, ಯಾರು ಸಹ ಬೆರಳು ತೋರುವುದಿಲ್ಲ. ನೀವು ಬಹಿರಂಗವಾಗಿ ತೋರ್ಪಡಿಸಿದರೆ ಸಮಾಜದ




■ ಹಿಂದಿ ಮೂಲ: ಶರದ್ ಸಿಂಗ್

■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್

ಕಲೆ: ಎಚ್.ಎಸ್. ಮೋನಪ್ಪ

# ಪ್ರೇಮ ಪ್ರಣಯದ ಬೆನ್ನಲ್ಲೇ ಭಯದ ವಾತಾವರಣ

